ಅನುಬಂಧ - 2

1990-91ನೇ ಸಾಲಿನಲ್ಲಿ ತೆಂಗು ಪ್ರದೇಶದಲ್ಲಿ ಹನಿ ನೀರಾವರಿ ಯೋಜನೆ (ರಾಜ್ಯ ವಲಯ ಮತ್ತು ಜಿಲ್ಲಾ ವಲಯ) ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿ ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ತೆಂಗು ಪ್ರದೇಶದಲ್ಲಿ ಹನಿ ನೀರಾವರಿ ಅಳವಡಿಕೆ (ಎಕರೆಗಳಲ್ಲಿ)	ಕೊಡಲಾದ ಸಹಾಯ ಧನದ ಮೊತ್ತ
(1)	<u>ರಾಜ್ಯವಲಯ</u>		
1)	ತುಮಕೂರು	72-00	80,315-00
2)	ಬೆಂಗಳೂರು (ಗ್ರಾಮಾಂತರ)	67-00	68,050-00
3)	ಚಿತ್ರದುರ್ಗ	12-00	22,125-00
4)	ಮೈಸೂರು	74-00	56,000-00
5)	ಉತ್ತರ ಕನ್ನಡ ಜಿಲ್ಲೆ	2-00	1,204-00
6)	ರಾಯಚೂರು	1-00	3,000-00
	ಒಟ್ಟು	228-00	2,30,694-00
(1)	<u>ಜಿಲ್ಲಾವಲಯ</u>		
1)	ಧಾರವಾಡ	72-00	1,00,800-00
2)	ಬಿಜಾಪುರ	33-00	46,200-00
3)	ದಕ್ಷಿಣ ಕನ್ನಡ ಜಿಲ್ಲೆ	391-00	5,47,400-00
	ಒಟ್ಟು	496-00	6,94,400-00

ಅರಣ್ಯ ಕಟ್ಟಿಗೆ ಹರಾಜು ನೀತಿ

2304 - ಶ್ರೀ ಬಾಬಾ ಗೌಡ ಪಾಟೀಲ (ಕಿತ್ತೂರು) : ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಕಟ್ಟಿಗೆ ಹರಾಜಿನಲ್ಲಿ ಹೆಚ್ಚಿನ ಧಾರಣೆಗೆ ಕೂಗಿದವರನ್ನು ಬಿಟ್ಟು ಅಧಿಕಾರಿಗಳು ಕಡಿಮೆ ಧಾರಣೆ ಕೂಗಿದವರಿಗೆ ಕಟ್ಟಿಗೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇದನ್ನು ತಪ್ಪಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಿದೆ?*

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಇಂತಹ ಪ್ರಕರಣಗಳು ಇದುವರೆಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಅಂತಹ ನಿರ್ದಿಷ್ಟ ಪ್ರಕರಣ ಗಮನಕ್ಕೆ ಬಂದಲ್ಲಿ ಸರ್ಕಾರವು ಈ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.